**O.S. 231-17** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ R G K, ವಕೀಲರಿಂದಃ**

4. ನನ್ನ ತಂದೆ ಮೂಲತಃ ಬಾಗಲಕೋಟ ಜಿಲ್ಲೆಯ ಬಿಸನಾಳ ಗ್ರಾಮದವರು, ಇಲ್ಲಿಗೆ ದುಡಿಯಲು ಬಂದಿದ್ದರು. ನಮ್ಮ ತಂದೆ ತಮ್ಮ ದುಡಿಮೆಯಿಂದ ಆಸ್ತಿ ಖರೀದಿ ಮಾಡಿದರು ಅಂದರೆ ಸರಿ. ಬಾಳಿಕಾಯಿ, ಬೆಲ್ಲ ವ್ಯಾಪಾರ ಮಾಡುತ್ತಿದ್ದರು ಅಂದರೆ ಸರಿ. ನಮ್ಮ ತಂದೆ ಮೃತ್ಯು ಪತ್ರದಂತೆ ಆಸ್ತಿ ಹಂಚಿಕೆ ಮಾಡಿಕೊಟ್ಟಿದ್ದಾರೆ ಅಂದರೆ ಸರಿ. ಅಣ್ಣ ತಮ್ಮಂದಿರ ಸಾಲ ಇರುವ ಕಾರಣ ರುದ್ರಗೌಡ ಚಿಕ್ಕನಗೌಡರಿಗೆ ನೋಂದಣಿ ಕಾಗದದ ಮೂಲಕ ಆಸ್ತಿ ಕೊಟ್ಟಿದ್ದೇವೆ ಅಂದರೆ ಸರಿ. ಅದೇ ರೀತಿ ಸಿದ್ದನಗೌಡ ಹಾಗೂ ಮಲ್ಲನಗೌಡನಿಗೆ ಮಾರಾಟ ಮಾಡಿದ್ದೇವೆ ಅಂದರೆ ಸರಿ. 1987 ರಲ್ಲಿ ವಿರಭದ್ರಪ್ಪ ಕಳ್ಳಿಮನಿಯವರಿಗೆ ಮಾರಾಟ ಮಾಡಿದ್ದೇವೆ ಅಂದರೆ ಸರಿ. ಇವೆಲ್ಲಾ ಆಸ್ತಿಗಳನ್ನು ಮನೆಯ ಅಡಚಣೆ ಸಲುವಾಗಿ ಮಾರಾಟ ಮಾಡಿದ್ದೇವೆ ಅಂದರೆ ಸರಿ. ಖರೀದಿ ಮಾಡಿದ ಕಾಲದಿಂದಲೂ ಆಸ್ತಿಗಳು ಸಿದ್ದನಗೌಡ ಹಾಗೂ ಮಲ್ಲನಗೌಡ, ವಿರಭದ್ರಪ್ಪ ಕಳ್ಳಿಮನಿ ಮತ್ತು ರುದ್ರಗೌಡ ರವರ ಸ್ವಾಧೀನದಲ್ಲಿವೆ ಅಂದರೆ ಸರಿ. ಅವರೆ ಮಾಲಿಕರು ಅಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.